5797 (6504) ಶ್ರೀ ಸೋಮಲಿಂಗಪ್ಪ ಎಂ. ಎಸ್. (ಸಿರಗುಪ್ಪ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಗುಪ್ಪ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಬಾಲಕರ ಮತ್ತು ಬಾಲಕಿಯರ ಪ್ರೌಢಶಾಲೆಗಳ ಸಂಖ್ಯೆ ಎಷ್ಟು: (ವಿವರ ಒದಗಿಸುವುದು)

ಆ) ಶಿರಗುಪ್ಪ ಪಟ್ಟಣದಲ್ಲಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಅತ್ಯವಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಹಾಗಿದ್ದರೆ, ಸರ್ಕಾರಿ ಬಾಲಕಿಯರ ಪ್ರೌಢಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು:

ಈ) ಇದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮವೇನು:

ಶ್ರೀ ಆರ್. ರಾಮಲಿಂಗಾರೆಡ್ಡಿ. (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) **ಬಾಲಕರ ಪ್ರೌಢಶಾಲೆ 11**

1. ಸರ್ಕಾರಿ ಕಿರಿಯ ಕಾಲೇಜು, ಶಿರಗುಪ್ಪ.
2. ಸರ್ಕಾರಿ ಪ್ರೌಢಶಾಲೆ, ರಾರಾವಿ.
3. ಸರ್ಕಾರಿ ಕಿರಿಯ ಕಾಲೇಜು, ತೆಕ್ಕಲಕೋಟೆ.
4. ಸರ್ಕಾರಿ ಪ್ರೌಢಶಾಲೆ, ಸೂನೂರು.
5. ಸರ್ಕಾರಿ ಕಿರಿಯ ಕಾಲೇಜು, ಶಿರಿಗೇರಿ.
6. ಸರ್ಕಾರಿ ಪ್ರೌಢಶಾಲೆ, ಹೆಚ್ಚೋಳ್ಳಿ
7. ಸರ್ಕಾರಿ ಪ್ರೌಢಶಾಲೆ, ಕಾವಿಹಾಳು.
8. ಸರ್ಕಾರಿ ಪ್ರೌಢಶಾಲೆ, ಸಿರಗುಪ್ಪ.
9. ಸರ್ಕಾರಿ ಪ್ರೌಢಶಾಲೆ, ಡರೂರು.
10. ಸರ್ಕಾರಿ ಪ್ರೌಢಶಾಲೆ, ತಾಳೂರು.
11. ಸರ್ಕಾರಿ ಪ್ರೌಢಶಾಲೆ, ಹಿರೇಹಡ್ಲಗಿ.

ಬಾಲಕಿಯರ ಪ್ರೌಢಶಾಲೆ – 01

01. ಸರ್ಕಾರಿ ಪ್ರೌಢಶಾಲೆ, ತೆಕ್ಕಲಕೋಟೆ.

ಆ) ಶಿರಗುಪ್ಪ ಪಟ್ಟಣದಲ್ಲಿ ಈಗಾಗಲೇ ಎರಡು ಸರ್ಕಾರಿ ಪ್ರೌಢಶಾಲೆಗಳು ಮತ್ತು ಒಂದು ಅನುದಾನಿತ ಪ್ರೌಢಶಾಲೆ ಇರುವುದರಿಂದ ಪ್ರತ್ಯೇಕ ಬಾಲಕಿಯರ ಪ್ರೌಢಶಾಲೆ ಪ್ರಾರಂಭಿಸುವ ಅವಶ್ಯಕತೆ ಇರುವುದಿಲ್ಲ.

ಉ) ರಾಜ್ಯದಲ್ಲಿ 2005–06ನೇ ಸಾಲಿನಲ್ಲಿ 124 ಪ್ರೌಢಶಾಲೆಗಳು ಮಂಜೂರಾಗಿವೆ. ಇವುಗಳಲ್ಲಿ 04 ಬಾಲಕಿಯರ ಶಾಲೆಗಳು ಹಾಗೂ 120 ಬಾಲಕ ಬಾಲಕಿಯರ ಸಹ ಶಿಕ್ಷಣವಿರುವ ಪ್ರೌಢಶಾಲೆಗಳು. ಶಿರಗುಪ್ಪ ಎಂ.ಸುಗೂರು ಗ್ರಾಮದಲ್ಲಿ ಈ ವರ್ಷ ಒಂದು ಸರ್ಕಾರಿ ಪ್ರೌಢಶಾಲೆ ಮಂಜೂರಾಗಿರುತ್ತದೆ.

5798 (6505) ಶ್ರೀ ಸೋಮಲಿಂಗಪ್ಪ ಎಂ. ಎಸ್. (ಸಿರಗುಪ್ಪ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?